SATYAVADI— Oldest Newspaper of Mysore Daily &
Reg No. M 1299 Weekly

ಸತ್ಯವಾದಿ

ಸಂಪುಟ 26 ಸಂಚಿಕೆ 292] ಬುಧವಾರ 28—4—1943 [3 ಪೈ

ಗಾಂಧೀಜಿಯನ್ನು ಬಿಡಿ

ಸುಪ್ರಸಿದ್ಧ ಗ್ರಂಥಕರ್ತರಾದ ಬರ್ನಾರ್ಡ್ ಷಾರವರು, ಭಾರತದ ಸಮಸ್ಯೆ ಬಗೆಹರಿಯಬೇಕಾದರೆ ಗಾಂಧೀಜಿಯವರನ್ನು ಚಕ್ರವರ್ತಿಯವರು ಬಿಡುಗಡೆ ಮಾಡಬೇಕೆಂದೂ, ಇವರನ್ನು ದಸ್ತಗಿರಿ ಮಾಡಿದ ಮಂತ್ರಿಗಳ ಬುದ್ಧಿ ಸ್ವಲ್ಪ ಮಂಕಾಗಿದ್ದುದೇ ಕಾರಣವೆಂದೂ, ಹೇಳಿರುವರು

ಯುದ್ಧ ವಾರ್ತೆ

ರಷ್ಯವು ಪೋಲಂಡಿದೊಡನೆ ವೈಮನಸ್ಸು ಗೊಂಡಿದೆ. ಪೋಲಿಷ್ ಸರಕಾರಕ್ಕೂ ಹಿಟ್ಲರಿಗೂ ವ್ಯವಹಾರವಿರುವುದರಿಂದಲೇ ಇದು ಒದಗಿರುವುದಾಗಿ ಮಾಲ್ಟೋಫ ರವರು ಹೇಳಿದ್ದಾರೆ. ಪೋಲಿಷ್ ರಾಯಭಾರಿಯ ಮಾತ್ರವೇ ಬಿಟ್ಟು ಹೊರಟನೆಂದು ಅರಿಯಲಾಗಿದೆ.

ರಷ್ಯಾದಲ್ಲಿ ಕ್ಯೂಬಿಷ್ ಪ್ರದೇಶದಲ್ಲಿ ನಿನ್ನೆ ವಿಮಾನ ಚಟುವಟಿಕೆ ವಿನಃ ಮತ್ತೇನೂ ವಿಶೇಷವಿಲ್ಲ.

ಅಮೆರಿಕನ್ನರು ಕಿಸ್ಕಾ ಮೇಲೆ ಮತ್ತೆ ಧಾಳಿ ನಡೆಸಿದರು.

ಕಹುಲಿ ಮೇಲೆ ಮತ್ತೆ ವಿಮಾನಧಾಳಿ ನಡೆಸಲ್ಪಟ್ಟಿತು. ಜಪಾನಿಯರಿಗೆ ತುಂಬಾ ನಷ್ಟವಾಯಿತು.

ಅಮೇರಿಕಾದಲ್ಲಿ ಜರ್ಮನ್ ಸಬ್‌ಮೆರಿನ್ ಹಾವಳಿ ತಪ್ಪಿಸಲು, ಏರ್‌ಕ್ರಾಫ್ಟ್ ಕ್ಯಾರಿಯರನ್ನು ಹೆಚ್ಚಚ್ಚಾಗಿ ತಯಾರುಮಾಡುತ್ತಿದ್ದಾರೆ.

ಟ್ಯುನಿಷಿಯಾದಲ್ಲಿ ನಿನ್ನೆ ಬ್ರಿಟಿಷರು ಒಂದು ನಿಮಿಷಕ್ಕೆ 30 ಟನ್ನಿನಷ್ಟು ಬಾಂಬಿನ ಸುರಿಮಳೆ ಸುರಿಸಿದರು.

ವಿವಿಧ ವರ್ತಮಾನ

ಈ ತಿಂಗಳು 18 ರಲ್ಲಿ ಪೂರ್ವ ಹಿಂದೂಸ್ಥಾನದ ಕಟಕ್‌ನಲ್ಲಿ ವಿಮಾನಧಾಳಿ ಎಚ್ಚರಿಕೆ ಬೆಳಿಗ್ಗೆ ೯ ಘಂಟೆಯಲ್ಲಿ ಕೊಡಲಾಯಿತು. ೧೦ ॥ ಗಂಟೆಗೆ ಶತ್ರುಗಳು ಹೋದ ಸಂಗತಿಯು ಸೈರ್ ಕೂಗಿ ಸಿದರು.

ಸಂಯುಕ್ತ ಸಂಸ್ಥಾನದ ರೆಲಿಜಿಠ್ ಎಂಬ ಏರ್‌ಕ್ರಾಫ್ಟ್ ಕ್ಯಾರಿಯರ್ ಮುಳುಗಿತೆಂಬ ಜರ್ಮನರ ಮಾತು ಸುಳ್ಳೆಂದೂ, ಅದಾಗಲಿ ಬೇರೆಯಾಗಲಿ ಮುಳುಗಿಸಲ್ಪಡಲಿಲ್ಲವೆಂದೂ ತಿಳಿಯಬಂದಿದೆ.

ಟ್ಯುನೀಷಿಯಾದಲ್ಲಿ ಆಕ್ಸಿಸ್ ಸೈನ್ಯವನ್ನು ಮಿತ್ರವಂಡಲಿಯವರು ಭೇದಿಸಿ ಮುನ್ನುಗ್ಗುತ್ತಿರುವರು. ಟ್ಯಾಂಕ್ ಯುದ್ಧ ಭೀಕರವಾಗಿ ನಡೆಯುತ್ತಿದೆ.

ನ್ಯೂಗಿನಿಯ ವೇವಾಕ್ ಬಂದರಿನಲ್ಲಿ ಜಪಾನೀಯರು ವಿಶೇಷವಾಗಿ ಯುದ್ಧ ಸಾಮಗ್ರಿಗಳನ್ನು ಶೇಖರಿಸುತ್ತಿರುವರು.

ಫೆಡರಲ್ ಕೋರ್ಟು ಜಡ್ಜ್‌ಮೆಂಟು ಪ್ರಕಾರ ಕಲ್ಕತ್ತಾ ಡಿಫನಲ್ ಛೀಫ್ ಫೈಸಿಡೆನ್ಸಿ ಮಾಜಿಸ್ಟ್ರೇಟರು 18 ಮಂದಿಯನ್ನು ಈ ದಿವಸ ಖುಲಾಸೆ ಮಾಡಿದರು.

ಭಂಗಾರ ಬೆಳ್ಳಿ ಧಾರಣೆ

ಸೇರ್	ರೂ.	72—4—0
ಬಂಗಾರ ತೊಲ	ರೂ.	96—8—0
ಬೆಳ್ಳಿ	,,	1—6—0

ಸೂಚನೆ— ಕಾರಣಾಂತರದಿಂದ ನಾಳೆ ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲ. ಶುಕ್ರವಾರದ ಸಂಚಿಕೆಯಲ್ಲಿ ಹೆಚ್ಚು ವಿಷಯಗಳು ಪ್ರಕಟಿಸಲ್ಪಡುವವು.

ಸೈನಿಕರಿಗೆ ಆಹಾರ ಪದಾರ್ಥಗಳನ್ನು ಕಳುಹಿಸುವುದು ಹೇಗೆ ?

ರಣರಂಗಕ್ಕೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವುದು ಸುಲಭವೆಲ್ಲಿ. ಅದಕಿ ಬಿಟ್ಟಿಗುದ್ದ ಪ್ರದೇಶವಾದರೆ ಆ ಕಷ್ಟ ಹೇಳತೀರದು. ಬ್ರಿಟಿಷರು ಅಸ್ಸಾಂನಿಂದ ಮುಂದೆ ನುಗ್ಗಿ ಜಪಾನಿಯರನ್ನು ಇನ್ನೂ ಎತ್ತಕ್ಕೆ ಸೆದೆಬಡಿದಿಲ್ಲವೆನ್ನಬಹುದು. ಈಗ ನಾವು ಅಸ್ಸಾಂ ವಿಷಯ ತೆಗೆದುಕೊಳ್ಳೋಣ. ಅಮೇರಿಕಾದವರು ಅಸ್ಸಾಮಿನಿಂದ ಬರ್ಮಾ ಎಲ್ಲೆಯಲ್ಲಿ ಪಡೆಯ ನುಗ್ಗಿಸಿರುತ್ತಾರಷ್ಟೆ. ಅಲ್ಲಿಗೆ ಹೋಗಲು ಮಧ್ಯದಲ್ಲಿ ನಾಗಾ ಪರ್ವತ ಶ್ರೇಣಿ ಇದೆ. ಈ ಅಮೇರಿಕಾದ ಸೈನ್ಯದವರಿಗೆ ಮದ್ದು ಗುಂಡು, ಆಹಾರ, ವರ್ತಮಾನಪತ್ರಿಕೆ ಅನೆಲ್ಲಾ ಈ ಕಾಡಿನಲ್ಲೇ ಒದಗಬೇಕು. ಅಸ್ಸಾಮಿನಲ್ಲಿ ಅಮೇರಿಕಾ ಉಗ್ರಾಣವಿದೆ. ಅಲ್ಲಿಂದ 'ಮೇಲ್ಕುಂಡ ಪದಾರ್ಥಗಳನ್ನು ಆನೆಗಳ ಮೇಲೂ, ಪ್ಯಾಕಸೂಟು ಮುಟ್ಟಾಂತರವೂ ತರಿಸಿಕೊಳ್ಳುವರು.

ಈ ಉಗ್ರಾಣದಲ್ಲಿ ಒಬ್ಬ ಕೂಲಿಯವನು ಎಷ್ಟು ಹೊರಬಲ್ಲನೋ ಅಷ್ಟು ತೂಕದ ಗಂಟನ್ನು ಕಟ್ಟುವರು. ಈ ಹೊರೆಯನ್ನು ಮತ್ತಾರೂ ಈ ಬೆಟ್ಟದಲ್ಲಿ ಹೊಂಲಾರರು. ಅಲ್ಲಿರುವ ನಾಗಾ ಜನರೇ ಈ ಕೆಲಸಕ್ಕೆ ನೇಮಿಸಲ್ಪಡುವರು. ತರು. ಒಬ್ಬ ಕೂಲಿಗೆ 60 ಪೌಂಡು ತೂಕವನ್ನು ಕೊಡುತ್ತಾರೆ. ಇದಕ್ಕೆ ನಿಶ್ಚಾರಿದ್ದದ್ದು ಇಬ್ಬರು ಮೂವರು ಪಲ್ಲಕ್ಕಿ ಹೊರುವ ರೀತಿಯಲ್ಲಿ ಹೊತ್ತುಕೊಂಡುಹೋಗುವುದಕ್ಕೂ ಭಾರವಾದ ದನ್ನ ಆನೆಯ ಮೇಲೆ ಸಾಗಿಸುವರು ಒಂದು ಆನೆಯು ಒಂದು ಸಾವಿರ ಪೌಂಡು ಭಾರವನ್ನು ಹೊರುವುದು. ಇದಕ್ಕೆ ಆನೆಗೂ ಅದರ ಕೂಲಿಯವನಿಗೂ ದಿನಕ್ಕೆ ಹತ್ತು ರೂಪಾಯಿ ಕೂಲಿ ಕೊಡುತ್ತಾರೆ. ಈ ವಿಧಾನಗಳಲ್ಲದೆ ಲಾರಿಗಳಲ್ಲಿ ಕಳುಹಿಸಲಾಗುವುದಿಲ್ಲ. ಇಲ್ಲಿ ಪ್ರಸಂಚದಲ್ಲೆಲ್ಲೂ ಇಲ್ಲದಷ್ಟು ಮಳೆಯಾಗುವುದು. ಹೆಚ್ಚು ಹೊಳೆಯನ್ನೆ ಅನೇಕ ಸಾರಿ ದಾಟಬೇಕಾಗುವುದು ಸಾಯಂಕಾಲದಲ್ಲಿ ಈ ಕೂಲಿಗಳೂ ಆನೆಗಳೂ ಒಂದು ಕೆಡೆ ತಂಗುತ್ತಾರೆ. ಅಲ್ಲಿ ಹರಿಯುವ ಹೊಳೆಯಲ್ಲಿ ಸ್ನಾನಮಾಡಿ ಊಟಮಾಡಿ ಅಲ್ಲಿ ರಾತ್ರೆ ಮಲಗುವರು. ಸಾಯಂಕಾಲದಲ್ಲಿ ಧ ಕೂಲಿಗಳ ನಾಗಾ ಮೇಸ್ತ್ರಿಯು ಬಂದು ಧಾರಕ್ಕೆ ಒಂದು ಗಂಟನ್ನು ಕಟ್ಟುವನು. ತಾವು ಹೋಗಬೇಕಾದ ಸ್ಥಳವನ್ನು ಸೇರಿ, ತಾವು ತಂದ ಸೂಟಿಗಳನ್ನು ಸೈನಿಕರಿಗೆ ತಲಪಿಸಿದ ಕೂಡಲೇ ಅವರ ಮೇಸ್ತ್ರಿಯು ಪ್ರತಿಯೊಬ್ಬರ ಧಾರದಲ್ಲಿ ಕಟ್ಟಿದ್ದ ಗಂಟುಗಳನ್ನು ಎಣಿಸುವನು. ಅದರಂತೆ ಪ್ರತಿ ಗಂಟಿಗೂ 10 ರೂಪಾಯಿನಂತೆ ಹಣವನ್ನು ಬೆಳ್ಳಿಯ ರೂಪಾಯಿ ರೂಪದಲ್ಲಿ ಕೊಡುವನು.

ಇದಲ್ಲದೆ ವಿಮಾನಗಳಲ್ಲಿಯೂ ಪ್ಯಾರಾಚೂಟುಗಳಲ್ಲಿಯೂ ಸಾಮಾನುಗಳನ್ನು ಕೆಳುಹಿಸುವುದುಂಟು. ದಾರಿಯಲ್ಲಿ ವಿಮಾನ ಇಳಿಸಲು ಆಗದಿರುವ ಸ್ಥಳಗಳಲ್ಲಿ ಸುಣ್ಣದಿಂದ ಗುರುತನ್ನು ಬಹುದೊಡ್ಡದಾಗಿ ಬರೆದಿರುತ್ತಾರೆ. ಇಲ್ಲಿ ಸಾಮಾನುಗಳನ್ನು ಪ್ಯಾರಚೂಟಿನಿಂದ ಕಳುಹಿಸಲಾಗುತ್ತೆ.

ವಿಷಿಯಲ್ಲಿ ಗೋರಿಂಗರವರೂ ಲವಲರವರೂ ಒಟ್ಟುಗೂಡಿ ಮಾತನಾಡಿದರೆಂದೂ ಅದು ಏನೆಂಬುದು ಹೊರಪಟ್ಟಿಲ್ಲವೆಂದೂ ತಿಳಿಯಬಂದಿದೆ.

ವ್ಯಾರ್ಥಕ್ಕೆ ಹಾಕಿದ್ದ ಪುಂಡುಕಂದಾಯವೆಲ್ಲಾ ವಸೂಲ್ಮಾಡಲಾಗಿದೆ.

ಇಷ್ಟರಲ್ಲೇ ಲವಲ್‌ರವರು ಎರಡೂವರೆ ಲಕ್ಷ ಫ್ರೆಂಚ್ ಕೂಲಿಗಾರರನ್ನು ಜರ್ಮನಿಗೆ ಕಳುಹಿಸುವರೆಂದೂ, ಜರ್ಮನಿಯಿಂದ 50 ಸಾವಿರ ಫ್ರೆಂಚ್ ಯುದ್ಧ ಖೈದಿಗಳನ್ನು ವಾಪಸ್ ಕರೆಸುವರೆಂದೂ ಗೊತ್ತಾಗಿದೆ.

ಫ್ರಾನ್ಸಿನಿಂದ 5 ಮಂದಿ ಫ್ರೆಂಚ್ ಮುಖ್ಯಸ್ಥರು ತಪ್ಪಿಸಿಕೊಂಡು ಲಂಡನ್ನಿಗೆ ಬಂದಿರುತ್ತಾರೆ. ಇವರು ಜನರಲ್ ಡಿಗಾಲರ ಸೈನ್ಯಕ್ಕೆ ಸೇರುವರಂತೆ.

ಒಂದು ಏರ್‌ಕ್ರಾಫ್ಟ್ ಕ್ಯಾರಿಯರನ್ನು ತಯಾರುಮಾಡಲು 20 ಕೋಟಿ ರೂಪಾಯಿಗಳು ಖರ್ಚಾಗುವುದು

ಈಗ ಶಾಂತಿಯಾದೀತೆ?

ಯುಗಸ್ಲಾವಿಯಾ ಇನ್ನೂ ಮೇಲೆ ಶಾಂತಿ ಪರಿಷತ್ತುಗಳ ವಿಷಯವನ್ನೇ ನಾವು ಕೇಳಬಹುದು. ಒಂದು ಕಡೆ ಸ್ಪೇನು ಮತ್ತು ಪಟಿಕಾನ್‌ಗಳು ಯೂರೋಪಿನ ಶಾಂತಿಯನ್ನು ಏರ್ಪಡಿಸಲು ಯತ್ನಿಸುತ್ತಿವೆ. ರಷ್ಯಾ ಜರ್ಮನಿಗಳಿಗೆ ಸಂಧಿಯನ್ನುಂಟುಮಾಡಲು ಚೀನಾದೊಂದಿಗೆ ಕರಾರು ಮಾಡಿಕೊಳ್ಳಲು ಜಪಾನು ಹಂಬಲಿಸುತ್ತಿದೆ. ಆಕ್ಸಿಸ್ ರಾಷ್ಟ್ರಗಳೆಲ್ಲವೂ ಯುದ್ಧದಲ್ಲಿ ಪದ್ದು ಬೆಂಡಾಗಿವೆ. ಈಗ ಮಿತ್ರ ರಾಷ್ಟ್ರಗಳು ದಿನೇದಿನೇ ಬಲಗೊಳ್ಳುತ್ತಲಿವೆ. ಹೇಗೋ ಶಾಂತಿ ಸ್ಥಾಪನೆಯಾದರೆ ಸಾಕೆಂದು ಆಕ್ಸಿಸ್ ರಾಷ್ಟ್ರಗಳು ಪರಿತಪಿಸುತ್ತಲಿವೆ.

೦ ೦ ೦

ವಿಕ್ಟೋರಿಯಾ ಮಹಾರಾಣಿಯವರೂ, ಅವರ ಮೊಮ್ಮಗನೂ

ವಿಕ್ಟೋರಿಯಾ ರಾಣಿಯವರ ಸಂಸಾರವು ದೊಡ್ಡದಾಗಿತ್ತು. ಒಂದು ಹಕ್ಕಾಧಿಪತ್ಯವನ್ನು ಆಳುವುದು ಎಷ್ಟು ಕಷ್ಟವೋ ಒಂದು ಸಂಸಾರವನ್ನು ನಡೆಸುವುದೂ ಅಷ್ಟೇ ಕಷ್ಟವೆಂದು ಅಕೆಯು ಹೇಳುತ್ತಿದ್ದಳು. ಒಂದು ಬಾರಿ ಅಕೆಯ ಮೊಮ್ಮಗನೊಬ್ಬನ ಜನ್ಮ ದಿನವು ಸಮೀಪಿಸುತ್ತಲಿತ್ತು. ಈ ವಿಷಯವನ್ನು ಅತನು ತನ್ನ ಅಜ್ಜಿಗೆ ಪತ್ರಮುಖೇನ ತಿಳಿಸಿದನು. ಅದರಲ್ಲಿ ಹಣ ಸಹಾಯ ಮಾಡಿದಲ್ಲಿ ಬಹಳ ಅನುಕೂಲನೆಂದೂ ತಿಳಿಸಿದ್ದನು. ಅಕೆಯು ಅತನ ಸಾಹಸವನ್ನಾಕ್ಷೇಪಿಸಿ ಉತ್ತರವನ್ನಿತ್ತಳು. ಅತನು ಪುನಃ ಅದಕ್ಕೆ ಉತ್ತರವನ್ನು ಬರೆದು ರಾಣಿಯವರಿಗೆ ಕಳುಹಿಸಿದನು. ಅದರಲ್ಲಿ ಈ ರೀತಿ ಬರೆದಿದ್ದನು— ಅಜ್ಜಿಯವಳೇ! ನಿಮ್ಮ ಉಪದೇಶದಿಂದ ಕೂಡಿದ ಪತ್ರಕ್ಕೆ ಅನೇಕ ವಂದನೆಗಳು. ಈ ಪತ್ರವನ್ನು ನಾನು ಐದು ಪೌಂಡುಗಳಿಗೆ ಮಾರಿದೆನು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವೆ ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು ಒಂದು ಪಲ್ಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿ ಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.

ಸ್ಟೂಡಿಯೋ— ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು

ಅಕ್ಕರ ಸಾಮಾಜಿಕ

ಭಾಷಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೊಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇಜ್ 1 ಆಣೆ. ಮುರಿಗಡ ಕಳುಹಿಸಬೇಕು ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಶ್ರೀರಾಮಚಂದ್ರ ಬುಕ್ ಡಿಪೋ

ದೇವರಾಜ ಮಾರ್ಕೆಟ್, ಮೈಸೂರು

For good printing

Saraswati Printing Press

Lansdowne Buildings, Mysore.

Lakshminarasimha Press

Srirampet, Mysore

ಬೇಕಾಗಿದೆ

ಸರಿಯಾದ ಸ್ಥಿತಿಯಲ್ಲಿರುವ ಸೆಕಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ವಿವರಗಳಿಗೆ ಕೆಳಗಿರುವ ಅಡ್ರೆಸ್ಸಿಗೆ ಬಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,

ಚಾಮರಾಜಪುರಂ, ಮೈಸೂರು.

Opera — Manonmani

ಅಪೆರಾ

4 ನೆ ಅಮೋಘ ವಾರ

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್.ಕೃಷ್ಣಮೂರ್ತಿ, ಎಸ್. ಧುರಂ, ಕಾಳಿ ಎಸ್. ರತ್ನಂ, ಮುಂತಾದವರು ಪಾತ್ರ ವಹಿಸಿರುವ

ಮನೋನ್ಮಣಿ

ಪಿ. ಮಂಜಪ್ಪ ಪರ್ಚೆಂಟ್

ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು.

Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.

The Satyavadi Press

Printers & Binders

Chamarajapuram

Mysore

SHAKTI SUDHA

A Panacea for All Debilites

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು

ನಿಮ್ಮ ಜ್ಞಾಪಕದಲ್ಲಿರಲಿ

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚು ವಿಷಯಗಳನ್ನು ಮೊಖಾ ಮೊಖಿ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್

ಚಾಮರಾಜಪುರಂ, ಮೈಸೂರು.